# ಉಪ ತಹಶೀಲ್ದಾರರ ನ್ಯಾಯಾಲಯ, ತಂಬ್ರಹಳ್ಳಿ-583224

**OFFICE OF THE DEPUTY TAHASILDAR, THAMBRAHALLI-583224**

ಎ.ವಿಲೇ.ನಂ.ಕಂ.ಪಹಣಿ.ವಿವಾದ/43/2015 16 ದಿನಾಂಕ: 18 .08.2016

ಉಪತಶೀಲ್ದಾರರು: ಶ್ರೀ ನಾಗರಾಜ. ಹೆಚ್.
ಉಪತಹಶೀಲ್ದಾರರು
ನಾಡ ಕಛೇರಿ ತಂಬ್ರಹಳ್ಳಿ

| ವಾದಿ (ಶ್ರೀ/ಶ್ರೀಮತಿ) | ಪ್ರತಿವಾದಿ (ಶ್ರೀ/ಶ್ರೀಮತಿ) |
|---|---|
| ಜೆ.ಎಸ್. ನಾಗರಾಜ ತಂದೆ ಶಿವಾನಂದಗೌಡ ವಾಸ ಕಿತ್ನೂರು ಗ್ರಾಮ ಹಬೊಹಳ್ಳಿ ತಾಲೂಕು | ಹರಿಜನ ಮೇಗಳಮನಿ ನೀಲಪ್ಪ ತಂದೆ ಪಕ್ಕೀರಪ್ಪ ವಾಸ ರಾಮೇಶ್ವರಬಂಡಿ ಗ್ರಾಮ ಹಬೊ ಹಳ್ಳಿ ತಾಲೂಕು. |
| [ಶ್ರೀ ಎ.ಶಿವಾನಂದ ವಕೀಲರು ಹಬೊ ಹಳ್ಳಿ] | [ಶ್ರೀ ಎಸ್. ವಿನಾಯಕ ವಕೀಲರು ಹಬೊ ಹಳ್ಳಿ] |

**ವ್ಯಾಜ್ಯದ ಜಮೀನಿನ ವಿವರ**

| ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|
| ರಾಮೇಶ್ವರಬಂಡಿ | 59/1/1ಎ | 1.38 |

*****

**ಪೀಠಿಕೆ:**

ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ರಾಮೇಶ್ವರಬಂಡಿ ಗ್ರಾಮದ ಸ.ನಂ. 59/1/1ಎ ವಿಸ್ತೀರ್ಣ 1.38 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಕ್ರಯ ದಸ್ತಾವೇಜು ಪ್ರಕಾರ ಖಾತೆ ಬದಲಾವಣೆ ಸಂಬಂಧ ಹಕ್ಕು ಬದಲಾವಣೆ ಆದೇಶ ಸಂಖ್ಯೆ:ಹೆಚ್10/2015-16 ರಲ್ಲಿ ಪ್ರತಿವಾದಿಗಳಿಂದ ತಕರಾರು ಬಂದಿರುವುದರಿಂದ ಪ್ರಕರಣವು ವಿವಾದಸ್ಪದವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು ತಂಬ್ರಹಳ್ಳಿ ಇವರು ಪ್ರಸ್ತುತ ಕಡತವನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕಡತವನ್ನು ಪರಿಶೀಲಿಸಲಾಗಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:25.02.2016 ರಂದು ನಿಗಧಿಗೊಳಿಸಿ ಉಭಯ ಪಕ್ಷಗಳಿಗೆ ನೋಟೀಸ್ ಮೂಲಕ ತಿಳಿಸಿ ವಿಚಾರಣೆಯನ್ನು ನಡೆಸಲಾಯಿತು.

ವಾದಿಗಳ ಪರವಾಗಿ ಶ್ರೀ ಎ.ಶಿವಾನಂದ ವಕೀಲರು ವಕೀಲರು ಹಬೊ ಹಳ್ಳಿ ಇವರು ವಕಾಲತ್ತು ನಾಮೆ ಸಲ್ಲಿಸುತ್ತಾ ಲಿಖಿತ ವಾದವನ್ನು ಸಲ್ಲಿಸಿರುತ್ತಾರೆ ಸದರಿಯವರ ಪ್ರಕಾರ ವ್ಯಾಜ್ಯದ ಜಮೀನು ಮೂಲತಃ ಶ್ರೀ ಆರ್ ಹನುಮನಗೌಡ ತಂದೆ ಓಬನಗೌಡ ಇವರಿಗೆ ಸೇರಿದ್ದು ಸದರಿಯವರಿಂದ 1985 ನೇ ಸಾಲಿನಲ್ಲಿ ಶ್ರೀಮತಿ ಹರಿಜನ ಅನ್ನಪೂರ್ಣವ್ವ ರವರು ಕ್ರಯಕ್ಕೆ ಪಡೆದಿದ್ದು ಪ್ರಸ್ತುತ ವ್ಯಾಜ್ಯದ ಜಮೀನು ಸದರಿಯವರ ಹಕ್ಕು ಅಧೀನಾನುಭವದಲ್ಲಿದ್ದು ವ್ಯಾಜ್ಯದ ಜಮೀನು ಶ್ರೀಮತಿ ಹರಿಜನ ಅನ್ನಪೂರ್ಣವ್ವರವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಕಾರಣ ಸದರಿಯವರು ದಿನಾಂಕ:19.12.2015 ರಂದು ನೊಂದಾಯಿತ ದಸ್ತಾವೇಜು ಮೂಲಕ ವಾದಿಗಳಾದ ಜೆ.ಎಸ್. ನಾಗರಾಜ ತಂದೆ ಶಿವಾನಂದಗೌಡ ಇವರಿಗೆ ಮಾರಾಟ ಮಾಡಿರುತ್ತಾರೆ, ಸದರಿ ಕ್ರಯ ವ್ಯವಹಾರದ ನಂತರ ವಾದಿಗಳೇ ವ್ಯಾಜ್ಯದ ಜಮೀನಿನ ಮಾಲಿಕರಾಗಿದ್ದು ಸದರಿಯವರಿಗೆ ನಷ್ಟ ಉಂಟುಮಾಡಬೇಕೆಂಬ ಉದ್ದೇಶದಿಂದ ಪ್ರತಿವಾದಿಗಳು ತಕರಾರು ಸಲ್ಲಿಸಿರುತ್ತಾರೆ ಕಾರಣ ಸದರಿ ತಕರಾರರನ್ನು ತಳ್ಳಿ ಹಾಕಿ ಭೂ ಕಂದಾಯ ಕಾಯ್ದೆ ಕಲಂ 128 ಮತ್ತು 129 ರಡಿಯಲ್ಲಿ ಕ್ರಯದಾರರ ಹೆಸರಿಗೆ ಖಾತೆ ಮಾಡಿಕೊಡುವಂತೆ ಕೋರಿರುತ್ತಾರೆ.

ಪ್ರತಿವಾದಿಗಳು ದಿನಾಂಕ:11.01.2016 ರ ರಂದು ಲಿಖಿತ ತಕರರಾರನ್ನು ಸಲ್ಲಿಸಿರುತ್ತಾರೆ, ಇವರ ಪರವಾಗಿ ಎಸ್ ವಿನಾಯಕ ವಕೀಲರು ಹಬ್ಬೊ ಹಳ್ಳಿ ಇವರು ವಕಾಲತ್ತುನಾಮೆ ಸಲ್ಲಿಸಿ ಲಿಖಿತ ವಾದವನ್ನು ಸಲ್ಲಿಸಿರುತ್ತಾರೆ ಸದರಿಯವರ ಪ್ರಕಾರ ವಾದಿಗಳು ಸಲ್ಲಿಸಿದ ಪ್ರಶ್ನಿತ ಹಕ್ಕುಬದಲಾವಣೆ ಅರ್ಜಿಯು ಸತ್ಯಕ್ಕೆ ದೂರವಾಗಿದ್ದು ಹಾಗೂ ಕಾನೂನು ಬಾಹೀರವಾಗಿರುತ್ತದೆ ಈ ಮುಂಚಿತವಾಗಿ ಪ್ರತಿವಾದಿಗಳು ಮಾನ್ಯ ಸಿವಿಲ್ ನ್ಯಾಯಾಲಯ ಜೆ.ಎಂ.ಎಫ್‌ಸಿ ಹಗರಿ ಬೊಮ್ಮನಹಳ್ಳಿ ರಲ್ಲಿ ದಾವೆ ಸಂಖ್ಯೆ 95/2003 ರಲ್ಲಿ ದಾವೆ ಹೂಡಿದ್ದು ಸದರಿ ಪ್ರಕರಣದಲ್ಲಿ ವ್ಯಾಜ್ಯದ ಜಮೀನನ್ನು ಆನ್ಯ ನ್ಯಾಯಾಲಯವು ಮೂರು ಭಾಗಗಳನ್ನಾಗಿ ಮಾಡಿ ತೀರ್ಪು ನೀಡಿದ್ದರಿಂದ ಅನ್ನಪೂರ್ಣಮ್ಮ ರವರು ಮಾನ್ಯ ಸಿವಿಲ್ ನ್ಯಾಯಾಲಯ ಹೊಸಪೇಟೆ ರಲ್ಲಿ ದಾವೆ ಸಂಖ್ಯೆ 76/2005 ರಲ್ಲಿ ದಾವೆ ಹೂಡಿದ್ದು ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯವು ದಿನಾಂಕ:12.08.2008 ರಂದು ವಜಾ ಮಾಡಿ ಆದೇಶ ನೀಡಲಾಗಿರುತ್ತದೆ. ಪ್ರಸ್ತುತ ಪ್ರಕರಣದ ತೀರ್ಪಿನಂತೆ ಅನ್ನಪೂರ್ಣಮ್ಮ ಇವರಿಗೆ ಸದರಿ ಆಸ್ತಿಯಲ್ಲಿ ಪೂರ್ತಿ ಹಕ್ಕು ಅಧಿಕಾರವಿರುವುದಿಲ್ಲ ಆದಾಗ್ಯೂ ಪ್ರತಿವಾದಿಗಳಿಗೆ ವಂಚನೆ ಮಾಡುವ ಉದ್ದೇಶದಿಂದ ಕ್ರಯ ವ್ಯವಹಾರ ನಡೆದಿದ್ದು ಸದರಿ ಕ್ರಯವು ಕಾನೂನು ಬಾಹೀರವಾಗಿರುತ್ತದೆ.ಕಾರಣ ಪ್ರಸ್ತುತ ಹಕ್ಕುಬದಲಾವಣೆ ಅರ್ಜಿಯನ್ನು ತಿರಸ್ಕರಿಸಲು ಕೋರಿರುತ್ತಾರೆ.

ವಾದಿ ಹಾಗೂ ಪ್ರತಿವಾದಿಗಳು ಮಂಡಿಸಿದ ವಾದ ಪ್ರತಿವಾದವನ್ನು ಆಲಿಸಲಾಗಿ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕೆಳಕಂಡ ಅಂಶಗಳು ಕಂಡುಬಂದಿರುತ್ತದೆ.

1. ಹಾಲಿ ಪಹಣಿ ಪತ್ರಿಕೆಯನ್ನು ಪರಿಶೀಲಿಸಲಾಗಿ ವ್ಯಾಜ್ಯದ ಜಮೀನು ಹರಿಜನ ಅನ್ನಪೂರ್ಣವ್ವ ತಂದೆ ಕೊರವಪ್ಪ ಇವರ ಹೆಸರಿನಲ್ಲಿರುತ್ತದೆ.
2. ಕ್ರಯ ಪತ್ರದ ಪ್ರತಿಯನ್ನು ಪರಿಶೀಲಿಸಲಾಗಿ ವ್ಯಾಜ್ಯದ ಜಮೀನಿನ ಪಟ್ಟಾದಾರರಾದ ಹರಿಜನ ಅನ್ನಪೂರ್ಣವ್ವ ತಂದೆ ಕೊರವಪ್ಪ ಇವರು ದಿನಾಂಕ:16.12.2015 ರಂದು ನೊಂದಣಿ ಕ್ರಯ ದಸ್ತಾವೇಜು ಸಂಖ್ಯೆ 3238/2015-16 ರ ಮೇರೆಗೆ ವಾದಿಗಳಾದ ಜೆ.ಎಸ್.ನಾಗರಾಜ ತಂದೆ ಜಿ ಶಿವನಗೌಡ ಇವರಿಗೆ ಕ್ರಯಕ್ಕೆ ನೀಡಿರುವುದು ಕಂಡುಬಂದಿರುತ್ತದೆ.
3. ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಪ್ರತಿವಾದಿಗಳು ಮತ್ತು ಇತರರು ಮಾನ್ಯ ಸಿವಿಲ್ ನ್ಯಾಯಾದೀಶರು (ಕಿರಿಯ ಶ್ರೇಣಿ) ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಹಗರಿಬೊಮ್ಮನಹಳ್ಳಿ ರಲ್ಲಿ ದಾವೆ ಸಂಖ್ಯೆ ಓ.ಎಸ್.ನಂ.95/2003 ರಲ್ಲಿ ದಾವೆ ಹೂಡಿದ್ದು ಸದರಿ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ:25.06.2005 ರಂದು ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಪ್ರಕರಣದ ವಾದಿಗಳಿಗೆ ಸದರಿ ಜಮೀನಿನಲ್ಲಿ 3ನೇ ಒಂದು ಭಾಗದಲ್ಲಿ ಹಕ್ಕುಬಾದ್ಯತೆ ಇದ್ದು ಸದರಿ ಆಸ್ತಿಯನ್ನು ಪಾಲು ವಿಭಾಗದ ಮೂಲಕ ಸ್ವಾಧೀನತೆಯನ್ನು ಪಡೆದುಕೊಳ್ಳುವಂತೆ ಆದೇಶ ನೀಡಲಾಗಿರುತ್ತದೆ.
4. ಮುಂದುವರೆದು ಪ್ರಕರಣ ಸಂಖ್ಯೆ ಓ.ಎಸ್.ನಂ.95/2003 ರಲ್ಲಿನ ಪ್ರತಿವಾದಿಗಳು ದಿನಾಂಕ:25.06.2005 ರ ಆದೇಶವನ್ನು ಪ್ರಶ್ನಿಸಿ ಮಾನ್ಯ ಸಿವಿಲ್ ನ್ಯಾಯಾದೀಶರು (ಹಿರಿಯ ಶ್ರೇಣಿ) ನ್ಯಾಯಾಲಯ ಹೊಸಪೇಟೆ ರಲ್ಲಿ ಪ್ರಕರಣ ಸಂಖ್ಯೆ ಆರ್.ಎ.ನಂ.76/2005 ರಲ್ಲಿ ಮೇಲ್ಮನವಿ ಸಲ್ಲಿಸಿದ್ದು ಪ್ರಸ್ತುತ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯವು ಪ್ರಕರಣದಲ್ಲಿ ಯಾರೂ ಪ್ರತಿನಿಧಿಸದೇ ಇರುವುದರಿಂದ ಹಾಗೂ ಯಾವದೇ ಆಕ್ಷೇಪಣೆಯನ್ನು ಸಲ್ಲಿಸದೇ ಇರುವುದರಿಂದ ಪ್ರಕರಣವನ್ನು ವಜಾಗೊಳಿಸಲಾಗಿರುತ್ತದೆ.

ಎ.ವಿಲೇ.ನಂ.ಕಂ.ಪಹಣಿ.ವಿವಾದ/43/2015 16

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ವ್ಯಾಜ್ಯದ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣವನ್ನು ವಿಚಾರಣೆಗೆ ಒಳಪಡಿಸಿ ಅಂತಿಮ ಆದೇಶವನ್ನು ನೀಡಲಾಗಿರುತ್ತದೆ ಹಾಗೂ ಈ ಪ್ರಕರಣದ ವಾದಿಗಳು ಮಾನ್ಯ ಸಿವಿಲ್ ನ್ಯಾಯಾದೀಶರು (ಹಿರಿಯ ಶ್ರೇಣಿ) ನ್ಯಾಯಾಲಯ ಹೊಸಪೇಟೆ ರಲ್ಲಿ ಮೇಲ್ಮನವಿ ಸಲ್ಲಿಕೆಯಾಗಿರುವುದು ಕಂಡುಬಂದಿರುತ್ತದೆ, ಈ ಹಿನ್ನೆಲೆಯಲ್ಲಿ ಮಾನ್ಯ ಸಿವಿಲ್ ನ್ಯಾಯಾಲಯದ ಆದೇಶವನ್ನು ಪರಿಗಣಿಸದೇ ಪ್ರಸ್ತುತ ನೊಂದಾಯಿತ ದಸ್ತಾವೇಜು ಸಂಖ್ಯೆ 3238/2015-16 ದಿನಾಂಕ:16.12.2015 ರಲ್ಲಿ ಕ್ರಯ ವ್ಯವಹಾರ ನಡೆದಿರುವುದು ಕಂಡುಬಂದಿದ್ದು ಪ್ರಸ್ತುತ ಕ್ರಯ ನೊಂದಣಿ ದಸ್ತಾವೇಜನ್ನು ಪ್ರಶ್ನಿಸಲು ಈ ನ್ಯಾಯಾಲಯದ ವ್ಯಾಪ್ತಿಗೆ ಇಲ್ಲವಾದ್ದರಿಂದ ಹಾಗೂ ಪ್ರಕರಣವು ಸಂಪೂರ್ಣ ಸಿವಿಲ್ ಸ್ವರೂಪದ್ದಾಗಿರುವುದರಿಂದ ಉಭಯ ಪಕ್ಷಕಾರರು ಸಿವಿಲ್ ನ್ಯಾಯಾಲಯದಲ್ಲಿ ತಮ್ಮ ಹಕ್ಕು ಸಾಭೀತುಪಡಿಸಿಕೊಳ್ಳಲು ಸೂಚಿಸಿ ಆದೇಶ ನೀಡುವುದು ಸೂಕ್ತವೆಂದು ಕಂಡುಬಂದಿರುವುದರಿಂದ ಈ ಕೆಳಕಂಡಂತೆ

## -: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನೆಲೆ ಮತ್ತು ಕಾರಣಗಳ ಆಧಾರದ ಮೇರೆಗೆ ಹಗರಿ ಬೊಮ್ಮನಹಳ್ಳಿ ತಾಲೂಕು ತಂಬ್ರಹಳ್ಳಿ ಹೋಬಳಿ ರಾಮೇಶ್ವರಬಂಡಿ ಗ್ರಾಮದ ಸ.ನಂ.59/1/1ಎ ವಿಸ್ತೀರ್ಣ 1.38 ಎಕರೆ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಉಭಯ ಪಕ್ಷಕಾರರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಸಾಭೀತುಪಡಿಸಿಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ ಈ ದಿನ ದಿನಾಂಕ: 18.08.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

18/08

[ನಾಗರಾಜ.ಹೆಚ್]
ಉಪ ತಹಶೀಲ್ದಾರರು,
ತಂಬ್ರಹಳ್ಳಿ
ನಾಡ ಕಛೇರಿ, ತಂಬ್ರಹಳ್ಳಿ

1. ವಾದಿ ಮತ್ತು ಪ್ರತಿವಾದಿಗಳಿಗೆ.
2. ಭೂಮಿ ಶಿರಸ್ತೆದಾರರು, ತಾಲೂಕು ಕಛೇರಿ ಹಗರಿ ಬೊಮ್ಮನಹಳ್ಳಿ ಇವರಿಗೆ ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

27/8/16